**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 47/2024**

ಸಿಡಬ್ಲ್ಯೂ-02/ಪಿಡಬ್ಲ್ಯೂ-01

| | |
|---|---|
| ಸಾಕ್ಷಿದಾರರ ಹೆಸರು | ಶಿವಾನಂದಪ್ಪ ಸವಣೂರು |
| ತಂದೆ ಹೆಸರು | ಪಕ್ಕೀರಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಚಂದ್ರಗಿರಿ ಗ್ರಾಮ |

**ದಿನಾಂಕ : 12-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-5 ನನ್ನ ಚಿಕ್ಕಪ್ಪನ ಮಗ. ಚಾಸಾ-3 ರವರ ಪರಿಚಯ ಇದೆ. ಪೊಲೀಸರು ಪಂಚನಾಮೆ ಉದ್ದೇಶಕ್ಕೆ ಚಾಸಾ-4 ರವರ ಜಮೀನಿಗೆ ಕರೆಸಿದ್ದರು. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆ ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಪಂಚನಾಮೆಯನ್ನು ನಿ.ಪಿ-1 ಎಂದು, ಅದರಲ್ಲಿಯ ಸಾಕ್ಷಿಯು ಗುರುತಿಸಿದ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು 2 ವರ್ಷದ ಹಿಂದೆ ಘಟನಾ ಹೊಲದಲ್ಲಿ ಜರುಗಿಸಿದ್ದರು. ಸದರಿ ಪಂಚನಾಮೆಯನ್ನು ಸಂಜೆ 5 ಗಂಟೆಯಿಂದ 6 ಗಂಟೆ ಅವಧಿಯಲ್ಲಿ ಚಾಸಾ-5 ರವರು ತೋರಿಸಿದ ಜಾಗದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಜರುಗಿಸಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಪಂಚನಾಮೆ ಸಮಯಕ್ಕೆ ಪೊಲೀಸರು 3 ರಿಂದ 4 ಬಡಿಗೆಗಳನ್ನು

ಜಪ್ತುಪಡಿಸಿಕೊಂಡಿರುತ್ತಾರೆ. ಪಂಚನಾಮೆ ಸಮಯಕ್ಕೆ ಪೊಲೀಸರು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಎರಡು ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿ.ಪಿ–2 ಮತ್ತು 3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಒಂದು ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–1 ಎಂದು, ಅದರಲ್ಲಿ ಇರುವ ಬಿಳಿಯ ಮಾದರಿ ಚೀಟಿಯ ಮೇಲೆ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಸಹಿಯನ್ನು ಮು.ಮಾ–1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ನಿ.ಪಿ–1 ರ ಪಂಚನಾಮೆಯನ್ನು ದಿಃ 05–03–2023 ರಂದು ಜರುಗಿಸಲಾಗಿತ್ತು ಎಂದರೆ ಸರಿ. ಪಂಚನಾಮೆ ಸಮಯಕ್ಕೆ ಪೊಲೀಸರು 3 ರಿಂದ 4 ಬಡಿಗೆಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಪ್ಪು ಹೇಳಿದ್ದು, ಆದರೆ ಘಟನಾ ಸ್ಥಳದಲ್ಲಿ ಕೇವಲ ಮು.ಮಾ–1 ರ ಒಂದು ಬಡಿಗೆಯನ್ನು ಮಾತ್ರ ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಜಿ.ವಿ ವಕೀಲರಿಂದ:**

1. ಘಟನಾ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ. ನನ್ನ ಜಮೀನಿನ ಸ ನಂಃ 12. ಘಟನಾ ಜಮೀನಿನ ಸುತ್ತಮುತ್ತಲೂ ಇರುವ ಜಮೀನುಗಳ ಮಾಲೀಕರು ಚಾಸಾ–1 ಮತ್ತು 4 ರವರ ಸಂಬಂಧಿಕರು ಎಂದರೆ ಸರಿ. ಚಾಸಾ–4 ರಿಂದ 9 ರವರು ಸಂಬಂಧಿಗಳು

ಎಂದರೆ ಸರಿ. ಚಾಸಾ–1 ರವರಿಗೆ ನಾನು ಸಂಬಂಧಿ ಎಂದರೆ ಸರಿ. ಘಟನೆಯಲ್ಲಿ ಹಲ್ಲೇ ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ. ಪಂಚನಾಮೆ ಉದ್ದೇಶಕ್ಕೆ ನನ್ನನ್ನು ಚಾಸಾ–5 ರವರು ಕರೆದಿದ್ದರು. ಚಾಸಾ–5 ರವರು ಕರೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ಅಲ್ಲಿಗೆ ಪೊಲೀಸರು ಬಂದಿದ್ದರು.

2. ಪಂಚನಾಮೆಯ ಪೂರ್ವದಲ್ಲಿ ಘಟನೆಯ ಬಗ್ಗೆ ನನಗೆ ಯಾರೂ ತಿಳಿಸಿರುವುದಿಲ್ಲ. ಘಟನೆಯಲ್ಲಿ ಜಗಳವು ಯಾವ ದಿನದಿಂದು ಮತ್ತು ಸಮಯದಲ್ಲಿ ಆಗಿತ್ತು ಎಂದು ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಘಟನೆ ಆದ ದಿನದಂದು ಫಸಲನ್ನು ಬೆಳೆಯಲಾಗಿತ್ತು. ಸದರಿ ಫಸಲನ್ನು ಕಟಾವು ಮಾಡಲಾಗಿತ್ತೊ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ–4 ಮತ್ತು 5 ರವರ ಜಮೀನಿನಲ್ಲಿ ಇದ್ದ ಬೋರ್ ವೆಲ್ ಆರೋಪಿಗಳ ಜಮೀನಿನ ಪಕ್ಕದಲ್ಲಿ ಇದೆ. ನಾನು ಪಂಚನಾಮೆಗೆ ಹೋದಾಗ ಸದರಿ ಬೋರ್ ವೆಲ್ ನೀರಿನಿಂದ ಆರೋಪಿತರ ಜಮೀನು ಹಸಿ ಇತ್ತೊ ಅಥವಾ ಇಲ್ಲವೋ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಪಂಚನಾಮೆಗೆ ನನ್ನನ್ನು ಕರೆದಾಗ ಎಷ್ಟು ಸಮಯ ಆಗಿತ್ತು ಎಂದು ನಿಖರವಾಗಿ ಗೊತ್ತಿಲ್ಲ. ನಾನು ಪಂಚನಾಮೆ ಸಮಯಕ್ಕೆ ಕೈ ಗಡಿಯಾರವನ್ನು ಕಟ್ಟಿರಲಿಲ್ಲ. ಪಂಚನಾಮೆಯನ್ನು ಸಂಜೆ 5 ರಿಂದ 6 ಗಂಟೆ ಅವಧಿಯಲ್ಲಿ ಬರೆದಿರುತ್ತಾರೆ ಎಂದು ಹಾಗೆ ಹೇಳಿರುತ್ತೇನೆ.

3. ಪಂಚನಾಮೆಯ ಸಂಗತಿಗಳನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಪಂಚನಾಮೆ ಸಂಗತಿಗಳನ್ನು ಅಲ್ಲಿಯೇ ಬರೆದಿರುತ್ತಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸಹಿಯನ್ನು ಮಾಡಿದಾಗ ಪಂಚನಾಮೆ ಸಂಗತಿಗಳನ್ನು ಬರೆಯಲಾಗಿತ್ತು. ಪಂಚನಾಮೆಯನ್ನು ಪೊಲೀಸರು ಘಟನಾ ಜಾಗದ ಜಮೀನಿನಲ್ಲಿ ನಿಂತುಕೊಂಡು ಬರೆದಿರುತ್ತಾರೆ. ಮೊದಲಿಗೆ ಪಂಚನಾಮೆಗೆ ಚಾಸಾ–5 ರವರು ಸಹಿ ಮಾಡಿರುತ್ತಾರೆ. ಚಾಸಾ–5 ರವರು ಸಹಿಯ ನಂತರ ಚಾಸಾ–3 ರವರು ಸಹಿ ಮಾಡಿರುತ್ತಾರೆ.

4. ಛಾಯಾ ಚಿತ್ರಗಳನ್ನು ತೆಗೆಯುವಾಗ ಕತ್ತಲೆ ಆಗಿತ್ತು ಎಂದರೆ ಸಾಕ್ಷಿಯು ಮಬ್ಬಿನ ಬೆಳಕಿತ್ತು ಎಂದು ನುಡಿಯುತ್ತಾರೆ. ನಿ.ಪಿ–2 ಮತ್ತು 3 ರ ಛಾಯಾ ಚಿತ್ರಗಳನ್ನು ಯಾವ ದಿನಾಂಕದಂಕು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಕರಣದಲ್ಲಿ ಇರುವ ಸಾಕ್ಷಿದಾರರು ನನ್ನ ಸಂಬಂಧಿಗಳು ಇರುವುದರಿಂದ, ನಾನು ಪಂಚನಾಮೆಗೆ ಹಾಜರಿರದಿದ್ದರೂ ಮತ್ತು ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಜರುಗಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–1 ರ ರೀತಿಯ ಬಡಿಗೆಗಳು ಸಾಮಾನ್ಯವಾಗಿ ಎಲ್ಲಾ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 47/2024**

ಸಿಡಬ್ಲ್ಯೂ-03/ ಪಿಡಬ್ಲ್ಯೂ-02

| | |
|---|---|
| ಸಾಕ್ಷಿದಾರರ ಹೆಸರು | ಜಗದೀಶ ವಾಲೀಕಾರ |
| ತಂದೆ ಹೆಸರು | ಭೀಮಪ್ಪ |
| ವಯಸ್ಸು | 51 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಚಂದ್ರಗಿರಿ ಗ್ರಾಮ |

**ದಿನಾಂಕ : 12-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-2 ಮತ್ತು 5 ರವರ ಪರಿಚಯ ಇದೆ. ಸಾಕ್ಷಿಯು ಒಂದು ದಾಖಲೆ ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ ದಾಖಲೆಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ದಿಃ 05-03-2023 ರಂದು ಚಾಸಾ-4 ರವರ ಜಮೀನಿನಲ್ಲಿ ಮಾಡಿದ್ದೆ. ಸದರಿ ಸಹಿಯನ್ನು ಮಾಡುವಾಗ ಚಾಸಾ-3, ಚಾಸಾ-5 ಮತ್ತು ಪೊಲೀಸರು ಇದ್ದರು. ಸದರಿ ಪಂಚನಾಮೆಯನ್ನು ಸಂಜೆ 5 ಗಂಟೆಯಿಂದ 6 ಗಂಟೆ ಅವಧಿಯಲ್ಲಿ ಜರುಗಿಸಿರುತ್ತಾರೆ. ಘಟನಾ ಸ್ಥಳವನ್ನು ಚಾಸಾ-4 ರವರು ತೋರಿಸಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ.

2. ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಕೋಲನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಅದೇ ಸಮಯಕ್ಕೆ ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಎರಡು ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿ.ಪಿ–2 ಮತ್ತು 3 ಎಂದು ಗುರುತಿಸಲಾಗಿದೆ. ಸದರಿ ಛಾಯಾ ಚಿತ್ರಗಳನ್ನು ಚಾಸಾ–4 ರವರ ಜಮೀನಿನಲ್ಲಿ ತೆಗೆದಿದ್ದರು. ಸಾಕ್ಷಿಯು ತಾನು ಹೇಳಿದ ಜಪ್ತುಪಡಿಸಿಕೊಂಡ ಕೋಲು ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ನಿ.ಪಿ–1 ರ ಪಂಚನಾಮೆಯನ್ನು ಬರೆಯಲು ಘಟನಾ ಸ್ಥಳವನ್ನು ಚಾಸಾ–4 ರವರು ತೋರಿಸಿಲ್ಲ, ಆದರೆ ಚಾಸಾ–5 ರವರು ತೋರಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು, ಆಗ ಚಾಸಾ–4 ರವರು ಸಹ ಹಾಜರಿದ್ದರು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಘಟನಾ ಸ್ಥಳದಿಂದ ಕೋಲನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ತಪ್ಪು ಹೇಳಿದ್ದು, ಆದರೆ ಪೊಲೀಸರು ಪಂಚನಾಮೆ ಸಮಯಕ್ಕೆ ನ್ಯಾಯಾಲಯದಲ್ಲಿ ಇರುವ ಮು.ಮಾ–1 ರ ಬಡಿಗೆಯನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಜಿ.ವಿ ವಕೀಲರಿಂದ:**

1. ಪಂಚನಾಮೆಯಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಪಕ್ಕಾ ಮಾಹಿತಿ ಇರುವುದಿಲ್ಲ. ಘಟನಾ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇರುವುದಿಲ್ಲ. ಪಂಚನಾಮೆಯನ್ನು ಸಂಜೆ 5 ರಿಂದ 6 ಗಂಟೆ ಅವಧಿಯಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ದಿಃ 05–03–2023

ರಂದು ಬರೆದಿರುತ್ತಾರೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಮತ್ತು ನನ್ನ ನಿಖರವಾದ ಜನ್ಮ ದಿನಾಂಕ ಗೊತ್ತಿಲ್ಲ. ಪಂಚನಾಮೆಗೆ ಸಹಕರಿಸಲು ನನ್ನನ್ನು ಶಿವರಾಜ ಎಂಬುವವರು ಕರೆದುಕೊಂಡು ಹೋಗಿರುತ್ತಾರೆ. ಘಟನೆಯ ಬಗ್ಗೆ ಶಿವರಾಜ ರವರು ನನಗೆ ಯಾವುದೇ ಮಾಹಿತಿ ನೀಡಿರಲಿಲ್ಲ.

2. ಪಂಚನಾಮೆಯನ್ನು ಬರೆದ ಸ್ಥಳದ ಉ–ಪಕ್ಕೀರಗೌಡ ದಂಡಿನವರ ರವರ ಜಮೀನು, ಪೂ–ಕಲ್ಲಪ್ಪ ಬಸಪ್ಪ ಸವಣೂರುರವರ ಜಮೀನು, ಪ–ಪಕ್ಕೀರಗೌಡ ದಂಡಿನವರ ರವರ ಜಮೀನು ಮತ್ತು ದ– ಹೊಳೆ ಇದೆ. ಸದರಿ ಚಕ್ಕುಬಂದಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಶಿವರಾಜ ರವರು ನನ್ನನ್ನು ಸಂಜೆ 4.45 ರ ಸುಮಾರಿಗೆ ಕರೆದಿದ್ದರು.

3. ಪಂಚನಾಮೆ ಸಮಯಕ್ಕೆ ನಾನು, ಪೊಲೀಸರು, ಚಾಸಾ–2, ಚಾಸಾ–5 ಮತ್ತು ಶಿವ ರಾಜ ರವರು ಇದ್ದೆವು. ಚಾಸಾ–1 ಮತ್ತು 4 ರವರ ಜಮೀನಿನ ಸುತ್ತಮುತ್ತಲೂ ಇರುವ ಜಮೀನುಗಳ ಮಾಲೀಕರು ಸಂಬಂಧಿಕರು ಎಂದರೆ ಸರಿ.ಆರೋಪಿಗಳು ಚಾಸಾ–1 ಮತ್ತು 4 ರವರಿಗೆ ಸಂಬಂಧಿಗಳು ಇರುವುದಿಲ್ಲ ಎಂದರೆ ಸರಿ. ಪಂಚನಾಮೆ ಸಂಗತಿಗಳನ್ನು ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಪಂಚನಾಮೆಯನ್ನು ಬರೆದು ಮುಗಿಸಿದ ಸಮಯಕ್ಕೆ ಬೆಳಕು ಇತ್ತು. ನಾನು ಸಹಿಯನ್ನು ಮಾಡಿದಾಗ ಪಂಚನಾಮೆ ಸಂಗತಿಗಳನ್ನು ಬರೆಯಲಾಗಿತ್ತು. ಅದನ್ನು ಪೊಲೀಸರು ಓದಿ ತಿಳಿಸಿದ್ದು, ಆದರೆ ನಾನು ಲಕ್ಷ್ಯ ನೀಡಿರುವುದಿಲ್ಲ. ಪಂಚನಾಮೆಗೆ ಎಷ್ಟು ಜನರು ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ.

4. ನಾನು ಪಂಚನಾಮೆಗೆ ಹೋಗಿರುವುದಿಲ್ಲ ಮತ್ತು ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 26–02–2023 ರಂದು ನಿ.ಪಿ–2 ಮತ್ತು 3 ರ ಛಾಯಾ ಚಿತ್ರಗಳನ್ನು ಪೊಲೀಸರು ತೆಗೆದಿದ್ದರು. ಮು.ಮಾ–1 ರ ಬಡಿಗೆಯನ್ನು ಸೇರಿ ಒಟ್ಟು 3 ಕೋಲುಗಳನ್ನು ಜಪ್ತುಪಡಿಸಲಾಗಿತ್ತು. ಮು.ಮಾ–1 ರ ಬಡಿಗೆ ಸಾಮಾನ್ಯವಾಗಿ ಎಲ್ಲಾ ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಪಂಚನಾಮೆಯ ಬಗ್ಗೆ

ನನಗೆ ಯಾವುದೇ  ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಬಡಿಗೆಗಳು ಮತ್ತು ಕೋಲುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 47/2024**

ಸಿಡಬ್ಲ್ಯೂ-04/ಪಿಡಬ್ಲ್ಯೂ-03

| | |
|---|---|
| ಸಾಕ್ಷಿದಾರರ ಹೆಸರು | ಸುಭಾಷಚಂದ್ರ ಶಿರಹಟ್ಟಿ |
| ತಂದೆ ಹೆಸರು | ಶಿವಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಚಂದ್ರಗಿರಿ ಗ್ರಾಮ |

**ದಿನಾಂಕ : 12-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ತಾಯಿ. ಚಾಸಾ-8 ನನ್ನ ತಂದೆ, ಚಾಸಾ-9 ನನ್ನ ತಮ್ಮ ಮತ್ತು ಚಾಸಾ-5 ರಿಂದ 7 ರವರು ನನ್ನ ಸಂಬಂಧಿಗಳು.

2. ದಿಃ 25-02-2023 ರಂದು ನಾನು ನನ್ನ ಜಮೀನಾದ ಚಂದ್ರಗಿರಿ ಗ್ರಾಮದ ಸ ನಂಃ 14 ರ ಜಮೀನಿನಲ್ಲಿ ಬೆಳೆದಿದ್ದ ಫಸಲಿಗೆ ನೀರು ಹಾಯಿಸಲು ಬೆಳಗ್ಗೆ 7 ಗಂಟೆಗೆ ಹೋಗಿದ್ದೆ. ಆ ರೀತಿ ನೀರನ್ನು ಹಾಯಿಸುವಾಗ, ನೀರಿನ ವೇಗಕ್ಕೆ ಪೈಪು ಕಳಚಿದ ಕಾರಣಕ್ಕೆ ಸ್ವಲ್ಪ ನೀರು ಆರೋಪಿಗಳ ಜಮೀನಿಗೆ ಹೋಗಿತ್ತು. ಎಂದಿನಂತೆ ದಿಃ 26-02-2023 ರಂದು ಸಹ ಸದರಿ ಜಮೀನಿಗೆ ನೀರನ್ನು ಹಾಯಿಸಲು ಬೆಳಗ್ಗೆ 7.30 ರ ಸುಮಾರಿಗೆ ಹೋಗಿದ್ದೆ. ಆಗ ಆರೋಪಿಗಳಾದ ಆನಂದಪ್ಪ ಮತ್ತು ಮೂಕಪ್ಪರವರು ಬಂದು ನನ್ನ ಜಮೀನಿಗೆ ಏಕೆ ನೀರನ್ನು ಬಿಟ್ಟಿದ್ದೀಯಾ ಎಂದು ಜಗಳ ತೆಗೆದು, ನನಗೆ ಕೆಟ್ಟ ಶಬ್ದಗಳಿಂದ

ಬೈದು, ಹೊಡೆದಿರುತ್ತಾರೆ. ನನಗೆ ಅವರು ಹಲ್ಲೇ ಮಾಡಿದಾಗ ಬೆಳಗ್ಗೆ 8.00 ರ ಸಮಯವಾಗಿತ್ತು. 1 ನೇ ಆರೋಪಿಯು ನನಗೆ ದೊಣ್ಣೆಯಿಂದ ಎದೆಗೆ ಮತ್ತು ದೇಹದ ಇತರ ಭಾಗಗಳಿಗೆ ಹೊಡೆದಿರುತ್ತಾನೆ. ಅದೇ ಸಮಯಕ್ಕೆ 2 ನೇ ಆರೋಪಿಯು ನನ್ನ ಮುಖಕ್ಕೆ ಕೈಯಿಂದ ಹಲ್ಲೇ ಮಾಡಿದ ಕಾರಣಕ್ಕೆ ನನ್ನ ಮೂಗಿನಲ್ಲಿ ಮತ್ತು ಹಣೆಯಲ್ಲಿ ಭಾಗದಲ್ಲಿ ರಕ್ತ ಬಂದಿರುತ್ತದೆ. ಅವರಿಬ್ಬರೂ ನನ್ನನ್ನು ನೆಲದಲ್ಲಿ ಎಳೆದಾಡಿ ಕಾಲುಗಳಿಂದ ತುಳಿದಿರುತ್ತಾರೆ.

3. ಜಗಳದ ಸಮಯಕ್ಕೆ ಚಾಸಾ–5 ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
ರವರು ಘಟನಾ ಸ್ಥಳಕ್ಕೆ ಬಂದು ಘಟನೆಯ ಬಗ್ಗೆ ನನ್ನ ತಂದೆಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ತಕ್ಷಣ ಘಟನಾ ಸ್ಥಳಕ್ಕೆ ಚಾಸಾ–1, ಚಾಸಾ–6 ರಿಂದ 8 ರವರು ಬಂದಿರುತ್ತಾರೆ. ಅವರು ಆರೋಪಿಗಳನ್ನು ಏಕೆ ನನಗೆ ಹೊಡೆದಿದ್ದೀಯೇ ಎಂದು ವಿಚಾರಿಸಿ, ಆರೋಪಿಗಳಿಗೆ ಬುದ್ದಿ ಮಾತು ಹೇಳಿದ್ದು, ಆಗ ಆರೋಪಿಗಳು ಇವತ್ತು ಚಾಸಾ–4 ರವರಿಗೆ ಹೊಡೆದಿದ್ದು, ಮತ್ತೊಮ್ಮೆ ಸಿಕ್ಕರೆ ಸಾಯಿಸಿ ಬಿಡುತ್ತೇವೆ ಎಂದು ಬೆದರಿಕೆ ಹಾಕಿದ್ದರು.

4. ಘಟನೆಯಲ್ಲಿ ಆದ ಗಾಯಗಳಿಗೆ ಚಿಕಿತ್ಸೆಯನ್ನು ಪಡೆಯಲು ನನ್ನನ್ನು ಚಾಸಾ–9 ರವರು ಹಾನಗಲ್ಲನ ತಾಲೂಕು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಅಲ್ಲಿ ನನಗೆ ಪ್ರಥಮ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಸೂಚಿಸಿದ್ದರು. ಘಟನೆ ಆದ ಮಾರನೇ ದಿನ ನನ್ನ ತಂದೆ ಮತ್ತು ತಾಯಿ ಆರೋಪಿಗಳ ವಿರುದ್ಧ ಪಿರ್ಯಾದನ್ನು ದಾಖಲಿಸಲು ಪೊಲೀಸ್ ಠಾಣೆಗೆ ಹೋಗಲು ತಯಾರಾದಾಗ, ಗ್ರಾಮದ ಹಿರಿಯರು ಪಿರ್ಯಾದನ್ನು ದಾಖಲಿಸುವುದು ಬೇಡ, ಗ್ರಾಮದಲ್ಲೇ ಪಂಚಾಯಿತಿ ಮಾಡಿ ಜಗಳವನ್ನು ಸರಿಪಡಿಸೋಣ ಎಂದು ಹೇಳಿದ ಕಾರಣಕ್ಕೆ ಮೊದಲಿಗೆ ಪಿರ್ಯಾದನ್ನು ದಾಖಲಿಸಿರಲಿಲ್ಲ. ನಂತರ ಯಾವುದೇ ಪಂಚಾಯಿತಿ ಮತ್ತು ರಾಜೀ ಆಗದೇ ಇರುವ ಕಾರಣಕ್ಕೆ ಘಟನೆಗೆ ಸಂಬಂಧಿಸಿದಂತೆ ಒಂದು ವಾರದ ನಂತರ ಚಾಸಾ–1 ರವರು ಪಿರ್ಯಾದನ್ನು ದಾಖಲಿಸಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಇರುವ ಆರೋಪಿಗಳನ್ನು ನೋಡಿ

ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಬಡಿಗೆಯನ್ನು ನೋಡಿ ಗುರುತಿಸಿ ಅದರಿಂದಲೇ 1ನೇ ಆರೋಪಿ ನನಗೆ ಹಲ್ಲೇ ಮಾಡಿದ್ದನು ಎಂದು ನುಡಿಯುತ್ತಾರೆ. ಸಾಕ್ಷಿ ಗುರುತಿಸಿದ ಬಡಿಗೆಯನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಜಿ.ವಿ ವಕೀಲರಿಂದ:</u>**

1. ಆರೋಪಿಗಳ ಜಮೀನಿನ ಸ ನಂಃ 14 ಇದ್ದು, ನಮ್ಮ ಕುಟುಂಬದ ಜಮೀನು ಸಹ ಸ ನಂಃ 14 ರ ಪೈಕಿ ಮತ್ತು ಸ ನಂಃ15 ರಲ್ಲಿ ಇವೆ. ನಮ್ಮ ಮತ್ತು ಆರೋಪಿಗಳ ಸದರಿ ಜಮೀನುಗಳ ಸುತ್ತಲೂ ನನ್ನ ಸಂಬಂಧಿಕರ ಜಮೀನುಗಳು ಇವೆ ಎಂದರೆ ಸರಿ. ಆರೋಪಿಗಳು ನನ್ನ ಸಂಬಂಧಿಗಳು ಇರುವುದಿಲ್ಲ ಎಂದರೆ ಸರಿ. ಘಟನೆಗೆ ಸಂಬಂಧಿಸಿದಂತೆ ನಾನು ದಿಃ 05-03-2023 ರಂದು ಹೇಳಿಕೆಯನ್ನು ನೀಡಿದ್ದೆ. ಘಟನೆಯು ದಿಃ 26-02-2023 ರಂದು ಆಗಿತ್ತು. ಘಟನೆ ಆದಾಗ ನಾನು ಮತ್ತು ಆರೋಪಿಗಳು ಮಾತ್ರ ಇದ್ದೆವು. ಘಟನೆ ಆದಾಗ ನನ್ನ ಜಮೀನಿನ ಸುತ್ತಮುತ್ತಲೂ ಇರುವ ಜಮೀನುಗಳಲ್ಲಿ ನನ್ನ ಸಂಬಂಧಿಕರು ಇದ್ದರು. ಘಟನೆಯು ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಗಿ ಸುಮಾರು 8.15 ರವರೆಗೆ ಆಗಿತ್ತು. ನನ್ನ ಹೇಳಿಕೆಯಲ್ಲಿ ಘಟನೆಯು ಸ ನಂಃ 14 ಮತ್ತು 15 ರ ಜಮೀನಿನಲ್ಲಿ ಆಗಿತ್ತು ಎಂದು ತಿಳಿಸಿರುತ್ತೇನೆ. ನೀರಿನ ಪೈಪ ಲೈನ್ ನಾನು ವಹಿವಾಟಿಸುವ ಜಮೀನಿನಲ್ಲಿ ಮಾತ್ರ ಇದೆ. ಆರೋಪಿಗಳ ಜಮೀನಿನಲ್ಲಿ ನಾನು ಮಾಡಿರುವ ಪೈಪ್ ಲೈನ್ ಇರುವುದಿಲ್ಲ.

2. ದಿಃ 25-02-2023 ರಂದು ಬೋರವೆಲ್ ನ್ನು ಬೆಳಗ್ಗೆ 6.00 ಗಂಟೆಗೆ ಚಾಲು ಮಾಡಿರುತ್ತೇನೆ. ನಂತರ ದಿನವಾದ ದಿಃ 26-02-2023 ರಂದು ಸಹ ನಾನು ನೀರನ್ನು ಹಾಯಿಸಲು ಜಮೀನಿಗೆ ಹೋಗಿದ್ದೆ. ದಿಃ 25-02-2023 ರಂದು ನೀರನ್ನು ಹಾಯಿಸಿದಾಗ ಯಾರ ಯಾರ ಜಮೀನಿಗೆ ನೀರು ಹೋಗಿತ್ತು ಎಂದು ನನಗೆ ಮಾಹಿತಿ ಇಲ್ಲ.

3. ಘಟನೆಯಲ್ಲಿ ಮೊದಲಿಗೆ 1 ನೇ ಆರೋಪಿಯು ನನಗೆ ಹೊಡೆದಿರುತ್ತಾನೆ. ಆತನು ನೇರವಾಗಿ ದೊಣ್ಣೆಯ ಮೂಲಕವೇ ಹೊಡೆದಿರುತ್ತಾನೆ. ಆತನು ದೊಣ್ಣೆಯಿಂದ ನನಗೆ ಹೊಡೆದಿರುತ್ತಾನೆ ಎಂದು ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಹೇಳಿಕೆಯಲ್ಲಿ ದೊಣ್ಣೆಯಿಂದ ನನಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಸಮಯಕ್ಕೆ ಚಾಸಾ–2, 3 ಚಾಸಾ–5 ರವರು ಬಂದಿರುತ್ತಾರೆ. ಸದರಿ 3 ಜನರು ಘಟನಾ ಸಮಯಕ್ಕೆ ಬಂದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಣ್ಣೆಯಿಂದ ಹಲ್ಲೇ ಮಾಡಿದ ಕಾರಣಕ್ಕೆ ನನ್ನ ಅಂಗಿಗೆ ರಕ್ತವು ಅಂಟಿಕೊಂಡಿತ್ತು. ಘಟನೆಗೆ ಸಂಬಂಧಿಸಿದಂತೆ ಹೇಳಿಕೆಯನ್ನು ಹಾನಗಲ್ಲನ ಸರಕಾರಿ ತಾಲೂಕು ಆಸ್ಪತ್ರೆಯಲ್ಲಿ ನೀಡಿದ್ದೆ. ರಕ್ತ ಆಗಿದ್ದ ಬಟ್ಟೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ. ನನ್ನನ್ನು ಸದರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಚಾಸಾ–9 ರವರು ಕರೆದುಕೊಂಡು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಘಟನೆಯ ಬಗ್ಗೆ ಗ್ರಾಮದ ಹಿರಿಯರು ಪಂಚಾಯಿತಿ ಮಾಡಿ ರಾಜೀ ಮಾಡಿಸುತ್ತೇವೆ ಎಂದು ಹೇಳಿದ್ದ ಬಗ್ಗೆ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ತನಿಖಾಧಿಕಾರಿಗೆ ನಾನು ಘಟನೆಗೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದೆ ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಘಟನೆಯಿಂದ ನನಗೆ ಆಗಿದ್ದ ಗಾಯಗಳ ಬಗ್ಗೆ ಚಿಕಿತ್ಸೆ ಪಡೆಯಲು ಹೋದಾಗ ಅದರ ಬಗ್ಗೆ ವೈದ್ಯರು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಹಾನಗಲ್ಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಹೆಚ್ಚುವರಿ ಚಿಕಿತ್ಸೆಯನ್ನು ನಾನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಕೀಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ದಿಃ 26–02–2023 ರಂದೇ ಪಡೆದಿರುತ್ತೇನೆ. ಅಲ್ಲಿ ಚಿಕಿತ್ಸೆ ಪಡೆದಾಗ ಎಷ್ಟು ಸಮಯ ಆಗಿತ್ತು ಎಂದು ಗೊತ್ತಿಲ್ಲ. ಆರೋಪಿಗಳ ಜಮೀನಿಗೆ ನೀರನ್ನು ಹಾಯಿಸಿದ ಸಂಬಂಧ ದಿಃ 26–02–2023 ರಂದು ಬೆಳಗ್ಗೆ 8.00 ಗಂಟೆ ಸುಮಾರಿಗೆ ಆರೋಪಿಗಳು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದರು, ಕೈಗಳಿಂದ ಮತ್ತು ಬಡಿಗೆಯಿಂದ ಹಲ್ಲೇ ಮಾಡಿದ್ದರು ಮತ್ತು ಜೀವ ಬೆದರಿಕೆ ಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಗಳ ನಡುವೆ ವೈಮನಸ್ಸು ಇರುವುದರಿಂದ ಘಟನೆಯು ನಡೆಯದೇ ಇದ್ದರೂ

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮತ್ತು ಆರೋಪಿಗಳ ನಡುವೆ ವೈಮನಸ್ಸು ಇರುವುದಿಲ್ಲ ಇಂದಿಗೂ ಸಹ ನಾನು ಆರೋಪಿಗಳನ್ನು ಮಾತನಾಡಿಸುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ